ದಿನಾಂಕಃ 22-06-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ವಾದಿ ಪರ ಶ್ರೀ ಹೆಚ್ ಎಂ ವಿ ವಕೀಲರಿಂದ

ವಾದಿ ಈ ದಾವೆಯನ್ನು ಸಿದ್ದಾಪುರದ ಸರ್ವೆ ನಂ 11ರ ಆಸ್ತಿಯ ವಿಚಾರವಾಗಿ ಹೂಡಿರುತ್ತಾರೆ. ಸದರಿ ದಾವೆಯನ್ನು ಯಾವ ವಿಚಾರವಾಗಿ ಹೂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸದರಿಯವರ ವಾದಪತ್ರದಲ್ಲಿನ ಸಂಗತಿಗಳು ನನಗೆ ಗೊತ್ತಿಲ್ಲ. ನಾನು ಸಲ್ಲಿಸಿರುವ ತಕಾರಾರಿಗೆ ಮಾಹಿತಿಯನ್ನು ನಮ್ಮ ವಕೀಲರು ಕೊಟ್ಟಿರುತ್ತಾರೆ, ತಕರಾರಿನಲ್ಲಿ ಬರೆದ ಸಂಗತಿಗಳ ಬಗ್ಗೆ ನನಗೆ ಗೊತ್ತಿಲ್ಲ, ಸಾಕ್ಷಿ ಮುಂದುವರೆದು ತಕರಾರಿನ ಬಗ್ಗೆ ನನಗೆ ಗೊತ್ತು ಎಂದು ನುಡಿಯುತ್ತಾರೆ. ನಾನು ಸದರಿ ತಕರಾರನ್ನು ದಾವಾಸ್ತಿಗಳು ನನ್ನ ಸ್ವಂತದ್ದು ಎಂದು ಸಲ್ಲಿಸಿರುತ್ತೇನೆ. ವಾದಿ ಈ ದಾವೆಗಾಗಿ ಯಾವ ದಾಖಲೆಗಳನ್ನು ಹಾಜರುಪಡಿಸಿರುತ್ತಾರೆ ಎಂದು ತಿಳಿದುಕೊಂಡಿರುವುದಿಲ್ಲ.

ವಾದಿ 1ನೇ ದಾವಾಸ್ತಿಯ ವಿಚಾರವಾಗಿ ಅವರ ತಂದೆಯ ಹೆಸರಿನಲ್ಲಿರುವ ಪಹಣಿಗಳನ್ನು ಹಾಜರುಪಡಿಸಿದ್ದು ಸದರಿ ಪಹಣಿಗಳ ಬಗ್ಗೆ ನನಗೆ ಗೊತ್ತಿಲ್ಲ. ಸದರಿ 1ನೇ ದಾವಾಸ್ತಿ ವಾದಿಯ ತಂದೆ ಸ್ವಾಧೀನದಲ್ಲಿದ್ದ ಕುರಿತು ಪಹಣಿಗಳನ್ನು ಹಾಜರುಪಡಿಸಿದ್ದು ಸದರಿ ದಾಖಲೆಗಳನ್ನು ನಾನು ನೋಡಿರುವುದಿಲ್ಲ, ಸರ್ವೆ ನಂ 11ರಲ್ಲಿ ವಾದಿ ಎಷ್ಟು ವಿಸ್ತೀರ್ಣದ ಜಾಗದಲ್ಲಿ ಅನುಭವದಲ್ಲಿದ್ದಾರೆ ಎಂದರೆ ಸಾಕ್ಷಿ ನಾವೇ ಅನುಭವದಲ್ಲಿದ್ದೇವೆ ಎಂದು ನುಡಿಯುತ್ತಾರೆ. ವಾದಿಯ ತಂದೆ 1ನೇ ದಾವಾಸ್ತಿಯನ್ನು ನನಗೆ ಬಿಟ್ಟುಕೊಟ್ಟ ಬಗ್ಗೆ ಏನಾದರೂ ಬರೆಸಿದ್ದೀರ ಎಂದರೆ ಸಾಕ್ಷಿ ಆಸ್ತಿ ನಮ್ಮ ಸ್ವಂತದ್ದು ಎಂದು ನುಡಿಯುತ್ತಾರೆ. ನನ್ನ ಪ್ರತಿವಾದಪತ್ರ ವಾದಿ ಸ್ವಾಧೀನದಲ್ಲಿರುವ ಬಗ್ಗೆ ಯಾವುದೇ ವಿಚಾರವನ್ನು ಬರೆಸಿರುವುದಿಲ್ಲ. ಸದರಿ ವಾದಿ ಈ ಹಿಂದೆ ಗುತ್ತಿಗೆಯಾಧಾರದ ಮೇಲೆ ಸ್ವಾಧೀನದಲ್ಲಿರುವ ಕುರಿತು ಬರೆಸಿರುವುದಿಲ್ಲ 1ನೇ ದಾವಾಸ್ತಿಯಲ್ಲಿ 1 ಎಕರೆ ಆಸ್ತಿ ನೆಕ್ಕುಟ್ಟಿ ಶೇಷರತ್ನಂರವರ ಹೆಸರಿಗೆ ಇದ್ದು ಸದರಿಯವರಿಗೆ ಆಸ್ತಿ ಹೇಗೆ ಹೋಯಿತು ಎನ್ನುವ ಬಗ್ಗೆ ನನಗೆ ಗೊತ್ತಿಲ್ಲ. 1ನೇ ಪ್ರತಿವಾದಿ ಸದರಿ ನೆಕ್ಕುಟ್ಟಿ ಶೇಷರತ್ನಂ ರವರ ಮಗಳು ಎಂದರೆ ನನಗೆ ಗೊತ್ತಿಲ್ಲ. 1ನೇ ಪ್ರತಿವಾದಿಯ ಕುರಿತು ನನ್ನ ತಕರಾರಿನಲ್ಲಿ ಆಗಲಿ ಅಥವಾ ನನ್ನಮುಖ್ಯ ವಿಚಾರಣಾ ಪ್ರಮಾಣಪತ್ರದಲ್ಲಾಗಲಿ ಯಾವುದೇ ವಿಚಾರವನ್ನು ನಮೂದಿಸಿರುವುದಿಲ್ಲ. ವಾದಿ ನೆಕ್ಕುಟ್ಟಿ ಶೇಷರತ್ನಂರವರಿಗೆ ಖಾತೆ ಯಾವ ರೀತಿ ಆಯಿತು ಎಂಬ ಬಗ್ಗೆ ದಾಖಲೆ ಹಾಜರಪಡಿಸಿದ್ದು ಸದರಿ ದಾಖಲೆಯನ್ನು ನೋಡಿದ್ದೀರ ಎಂದರೆ ಸಾಕ್ಷಿ ಸದರಿ ದಾಖಲೆ ನನಗೆ ಸಂಬಂಧಪಟ್ಟಿಲ್ಲ ಎಂದು ನುಡಿಯುತ್ತಾರೆ.

ನಿಡಿ–8ನ್ನು ನಾನು ಯಾವ ವಿಚಾರವಾಗಿ ಹಾಜರುಪಡಿಸಿದ್ದೇನೆ ಎಂದು ನನಗೆ ಗೊತ್ತಿಲ್ಲ. ಹಾಗಾಗಿ ನಿಡಿ–8ರಲ್ಲಿ ಬರೆದಿರುವ ಸಂಗತಿಗಳು ನನಗೆ ಗೊತ್ತಿಲ್ಲ. ಸರ್ವೆ ನಂ11 ರಲ್ಲಿ 1 ಎಕರೆಯನ್ನು ಹೊರತುಪಡಿಸಿ 1ನೇ ಪ್ರತಿವಾದಿ ಅನುಭವದಲ್ಲಿರುವ ಕುರಿತು ನನಗೆ ಗೊತ್ತಿಲ್ಲ. ನಿಡಿ–8ರ ಆಧಾರದ ಮೇಲೆ 1ನೇ ಪ್ರತಿವಾದಿಯ ಹೆಸರಿಗೆ ಖಾತೆ ಬದಲಾವಣೆಯಾಗಿದೆ ಎಂದರೆ ನನಗೆ ಗೊತ್ತಿಲ್ಲ. 1ನೇ ಪ್ರತಿವಾದಿಯ ತಾಯಿ ಸರ್ವೆ ನಂ 11/2 ರಲ್ಲಿ 1 ಎಕರೆ ಆಸ್ತಿಯನ್ನು ಕ್ರಯಕ್ಕೆ ಪಡೆದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ 11/1 ಮತ್ತು ಸರ್ವೆ ನಂ 11/2 ಬೇರೆ ಬೇರೆ ಆಸ್ತಿಗಳು

ಎಂದರೆ ಸಾಕ್ಷಿ ಸರ್ವೆ ನಂ 11/1 ನಮ್ಮ ಆಸ್ತಿ, ಸರ್ವೆ ನಂ 11/2 ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ 1 ನೇ ಪ್ರತಿವಾದಿ ರಾಮನಾಯ್ಕ ಬಿನ್ ಬಾಬ್ರನಾಯ್ಕ ಮತ್ತು ರಾಮನಾಯ್ಕ ಬಿನ್ ಹನುಮನಾಯ್ಕರವರಿಂದ ಕ್ರಯಕ್ಕೆ ಪಡೆದ ಆಸ್ತಿ ಎಂದರೆ ನನಗೆ ಗೊತ್ತಿಲ್ಲ. ನನ್ನ ಪ್ರಮಾಣಪತ್ರದಲ್ಲಿ ಸದರಿಯವರಿಂದ ಕ್ರಯಕ್ಕೆ ಪಡೆದ ನಮೂದಿಸಿದ ಬಗ್ಗೆ ನನಗೆ ಗೊತ್ತಿಲ್ಲ. ಆದಕಾರಣ ಶೇಷರತ್ನಂ ರವರಿಗೆ ದಾವಾಸ್ತಿಯಲ್ಲಿ ಯಾವುದೇ ಸ್ವಾಧೀನವಾಗಲಿ ಮಾಲೀಕತ್ವವಾಗಲಿ ಇಲ್ಲ ಎಂದರೆ ಸರಿ. ಅದರಂತೆ ನಿಡಿ–8 ರ ಆಧಾರದ ಮೇಲೆ ಎಂ ಆರ್ ನಂ 2/1976–77 ರಂತೆ 1 ನೇ ಪ್ರತಿವಾದಿಯ ತಾಯಿಯ ಹೆಸರಿಗೆ ಖಾತೆ ಬದಲಾವಣೆಯಾಗಿದೆ ಎಂದರೆ ನನಗೆ ಗೊತ್ತಿಲ್ಲ. ಸದರಿಯಾಧಾರದ ಮೇಲೆ ಪಹಣಿಯಲ್ಲಿ ನಮೂದಾಗಿರುವುದು ತಪ್ಪು ಎಂದರೆ ಸರಿ. ಆದ ಕಾರಣ 1 ನೇ ಪ್ರತಿವಾದಿಯ ತಾಯಿಯ ಹೆಸರಿಗೆ ಖಾತೆ ಪಹಣಿ ಬದಲಾವಣೆಯಾದರೂ ಸಹ ರಾಮನಾಯ್ಕ ಮತ್ತು ಲಕ್ಷ್ಮನಾಯ್ಕ ರವರು 2 ಎಕರೆ 20 ಗುಂಟೆ ಜಮೀನಿನಲ್ಲಿ ಸ್ವಾಧೀನದಲ್ಲಿದ್ದರು ಎಂದರೆ ಸರಿಯಲ್ಲ. ಸದರಿಯವರು ಸದರಿ ಜಮೀನಿನಲ್ಲಿ ಸ್ವಾಧೀನದಲ್ಲಿದ್ದ ಕಾರಣದಿಂದಲೇ ಪಹಣಿಯಲ್ಲಿ ಸದರಿಯವರ ಇಬ್ಬರ ಹೆಸರು ಕಲಂ ನಂ 12 ರಲ್ಲಿ ಮುಂದುವರೆಯುತ್ತಿದೆ ಎಂದರೆ ನನಗೆ ಗೊತ್ತಿಲ್ಲ. ವಾದಿ ಅದರ ಆಧಾರದ ಮೇಲೆ ನಮೂದಾಗ ಮ್ಯೂಟೇಶನ್ ನ್ನು ರದ್ದುಪಡಿಸುವಂತೆ ಉಪವಿಭಾಗಾಧಿಕಾರಿಗಳ ನ್ಯಾಯಾಲಯದ ಮುಂದೆ ಮೇಲ್ಮನವಿಯನ್ನು ಸಲ್ಲಿಸಿದ್ದರು ಎಂದರೆ ಸಾಕ್ಷಿ ಅದನ್ನು ನಾವು ಸಲ್ಲಿಸಿದ್ದೆವು ಎಂದು ನುಡಿಯುತ್ತಾರೆ. ವಾದಿ ಸಲ್ಲಿಸಿರುವ ನಿಪಿ–12 ರ ಕುರಿತು ನನಗೆ ಗೊತ್ತಿಲ್ಲ. ಸದರಿ ಮೇಲ್ಮನವಿ ವಜಾ ಆಗಿದ್ದು ಸೂಕ್ತ ಪರಿಹಾರಕ್ಕಾಗಿ ಸಿವಿಲ್ ನ್ಯಾಯಾಲಯಕ್ಕೆ ಹೋಗುವಂತೆ ಅದೇಶಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ತದ ನಂತರ ವಾದಿ ಈ ನ್ಯಾಯಾಲಯದಲ್ಲಿ ಈ ದಾವೆ ಹೂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿ ಸರ್ವೆ ನಂ11 ರಲ್ಲಿನ 1 ಎಕರೆ 10 ಗುಂಟೆ ಜಮೀನಿಯಲ್ಲಿ ವಾದಿಯವರೇ ಸ್ವಾಧೀನದಲ್ಲಿದ್ದಾರೆ ಎಂದು ಹೇಳಿಕೆ ಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ, ಅದೇ ರೀತಿ 1 ನೇ ಪ್ರತಿವಾದಿಯ ತಮ್ಮಂದಿರಾದ ಸುರೇಶ್ ಮತ್ತು ರಾಮಮೂರ್ತಿ ಸಹ ಹೇಳಿಕೆ ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

ನನ್ನ ತಂದೆ ಮತ್ತು ವಾದಿಯ ತಂದೆ ಒಟ್ಟು ಕುಟುಂಬದ ಆಸ್ತಿಗಳನ್ನು ಜುಬಾನಿ ಹಿಸ್ಸೆಯಂತೆ ಆಸ್ತಿಗಳನ್ನು ಹಂಚಿಕೊಂಡು ಅದರಂತೆ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ. ಆದ ಕಾರಣದಿಂದ ರಾಮನಾಯ್ಕ ಮತ್ತು ಲಕ್ಷ್ಮನಾಯ್ಕರವರ ಹೆಸರು ಪಹಣಿಗಳಲ್ಲಿ ಜಂಟಿಯಾಗಿ ಬರುತ್ತಿದೆ ಎಂದರೆ ಸರಿಯಲ್ಲ. ಸದರಿ ಪಹಣಿಗಳಲ್ಲಿ ನೆಕ್ಕುಟ್ಟಿ ಶೇಷರತ್ನಂರವರ ಹೆಸರಿಗೆ ಖಾತೆ ಬದಲಾವಣೆಯಾದ್ದರಿಂದ ಲಕ್ಷ್ಮನಾಯ್ಕರವರ ಹೆಸರನ್ನುತೆಗೆದಿರುತ್ತಾರೆ ಎಂದರೆ ಸರಿಯಲ್ಲ. ಈ ದಾವೆಯೊಂದಿಗೆ ವಾದಿ ತಾತ್ಕಾಲಿಕ ನಿರ್ಬಂದಕಾಜ್ಞೆಗಾಗಿ ಅರ್ಜಿ ಸಲ್ಲಿಸಿದ್ದರು ಎಂದರೆ ನನಗೆ ಯಾವುದೇ ಮಾಹಿತಿ ಇಲ್ಲ. ಸದರಿ ತಾತ್ಕಾಲಿಕ ನಿರ್ಬಂದಕಾಜ್ಞೆಯನ್ನು ಈ ನ್ಯಾಯಾಲಯ ವಜಾ ಮಾಡಿದ್ದು ಸದರಿ ಆದೇಶದ ವಿರುದ್ಧ ವಾದಿ ಎಂ ಎ ನಂ 8/2023 ರಂತೆ ಮೇಲ್ಮನವಿ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಮೇಲ್ಮನವಿಗೆ ನಾನು

ಹಾಜರಾಗಿಲ್ಲ. ಸದರಿ ಮೇಲ್ಮನವಿಯಲ್ಲಿ ನನ್ನ ಪರವಾಗಿ ಹಾಜರಾದ ವಕೀಲರು ನನ್ನ ಪರವಾಗಿ ಲಿಖಿತ ವಾದಮಂಡನೆಯನ್ನು ಹಾಜರುಪಡಿಸಿದ್ದಾರೆ ಎಂದರೆ ಸರಿ. ಸಾಕ್ಷಿಗೆ ಈಗ ಒಂದು ದಾಖಲೆಯನ್ನು ತೋರಿಸಲಾಗಿ ಸದರಿ ದಾಖಲೆಎಂ ಎ ನಂ 8/2023 ರಲ್ಲಿ ಸಲ್ಲಿಸಿದ ಲಿಖಿತ ವಾದಮಂಡನೆಯಾಗಿದ್ದು, ಸಾಕ್ಷಿ ಅದನ್ನು ನೋಡಿ ಒಪ್ಪಿ ಗುರುತಿಸಿದ ಮೇರೆಗೆ ಅದನ್ನು **ನಿಪಿ-16** ಎಂದು ಗುರುತಿಸಲಾಯಿತು. ಸದರಿ ಲಿಖಿತ ವಾದಮಂಡನೆಯಲ್ಲಿ ರೀ ಸರ್ವೆನಂ 11/1 ಮತ್ತು 11/1 ಪಿ2 ರಲ್ಲಿರುವ 2 ಎಕರೆ 20 ಗುಂಟೆ ಜಮೀನನ್ನುಮೂಲ ಮಂಜೂರುದಾರರಾದ ರಾಮನಾಯ್ಕ ಬಿನ್ ದ್ಯಾವ್ಲನಾಯ್ಕರವರ ಕಾನೂನು ಬದ್ದ ಮತ್ತು ನೈಜ ವಾರಸುದಾರರಾದ 2 ರಿಂದ 8 ನೇ ಪ್ರತಿವಾದಿಯವರಿಗೆ ಬಿಡಿಸಿಕೊಡಲು ಆದೇಶಿಸಬೇಕಾಗಿ ಕೋರಿರುತ್ತಾರೆ ಎಂದರೆ ಸಾಕ್ಷಿ ನಾವೇ ಸ್ವಾಧೀನದಲ್ಲಿದ್ದೇವೆ ಎಂದ ನುಡಿಯುತ್ತಾರೆ. ಅದರಂತೆ ಸದರಿ ಲಿಖಿತ ವಾದಮಂಡನೆಯ ಆಧಾರದ ಮೇಲೆ ವಾದಿ ಸಲ್ಲಿಸಿರುವ ಮೇಲ್ಮನವಿ ಅವರ ಪರವಾಗಿ ಆದೇಶವಾಗಿದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಆದೇಶದ ವಿರುದ್ಧ ನಾನು ಯಾವುದೇ ಮೇಲ್ಮನವಿಯನ್ನು ಸಲ್ಲಿಸಿರುವುದಿಲ್ಲ, ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಸದರಿ ವಿಚಾರದಕುರಿತು ಯಾವುದೇ ಅಪೀಲು ಅರ್ಜಿ ದಾಖಲಾಗಿರುವುದಿಲ್ಲ. ಸದರಿ ಮೇಲ್ಮನವಿಯ ಆದೇಶದಲ್ಲಿ ವಾದಿಯ ಆಸ್ತಿಗೆ ತೊಂದರೆ ಕೊಡಬಾರದು ಎಂದು ಆದೇಶವಾಗಿದೆ ಎಂದರೆ ನನಗೆ ಗೊತ್ತಿಲ್ಲ.

(ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು ಸಮಯಾವಕಾಶ ನೀಡಲಾಯಿತು).

**(**ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು**)**

**ಓ.ಹೇ.ಕೇ. ಸರಿ ಇದೆ.**

02 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ. ಚನ್ನಗಿರಿ.